ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೧೪ನೇ ಫೆಬ್ರವರಿ ೧೯೯೪, ಮಾಘ ೨೩, ಶಕ ೧೯೧೫

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೫ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ರಸ್ತೆ ಮತ್ತು ಕಟ್ಟಡಗಳ ಅಭಿವೃದ್ಧಿಗ ಮೀಸಲಾಗಿಟ್ಟ ಹಣ

183- ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಜಿರಾದ್) : ಮಾನ್ಯ ಲೋಕೋಪಯೋ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ನೇ ಸಾಲಿನಲ್ಲಿ ರಾಜ್ಯದಲ್ಲಿ ರಸ್ತೆ ಮತ್ತು ಕಟ್ಟಡಗಳ ಅಭಿವೃದ್ಧಿಗ (ಸಿ ಅಂಡ್ ಬಿ) ಎಷ್ಟು ಹಣವನ್ನು ಆಯವ್ಯಯದಲ್ಲಿ ಮೀಸಲಾಗಿಡಲಾಗಿ (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)*

ಆ) *ಆ ಪೈಕಿ ಬಿಡುಗಡೆ ಮಾಡಲಾದ ಹಣವೆಷ್ಟು ಹಾಗೂ ವಿಚ್ರ್ಚು ಮಾಡಲ ಮೊತ್ತವೆಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)*

ಇ) *ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ವಿಶೇಷವಾಗಿ ಬೀದರ್ ಜಿಲ್ಲೆಯ ಹಣದ ಅಭಾವವಿರುವುದರಿಂದ ರಸ್ತೆ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವ ನಿಜವೇ.*

ಈ) *ಈ ಪ್ರದೇಶದಲ್ಲಿ ನಿಗಧಿಪಡಿಸಲಾಗಿದ್ದ ಹಣವನ್ನು ಬಿಡುಗಡೆ ಮಾ ಪ್ರಯುಕ್ತ ಕೆಲಸವು ಮುಗಿದ್ದರೂ ಸಹ ಗುತ್ತಿಗೆದಾರರಿಗೆ ಹಣವನ್ನು ಪಾ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.*

ಉ) *ಆ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?*

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ವಿವರಗಳನ್ನು ಲಗತ್ತಿಸಿದ ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಲಗತ್ತಿಸಿದ ಅನುಬಂಧದಲ್ಲಿ ನೀಡಲಾಗಿದೆ.

ಇ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹಣದ ಅಭಾವದಿಂದ ಅಭಿವೃ ಕಾಮಗಾರಿಗಳು ಸ್ಥಗಿತಗೊಂಡಿಲ್ಲ.

ಈ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮಾಡಿರುವ ಲೋಕೋಪಯೋ ಕಾಮಗಾರಿಗಳಿಗೆ ಪಾವತಿ ಮಾಡಬೇಕಿರುವ ಒಟ್ಟು 131.20 ಲಕ್ಷ ರೂ.ಗಳ ಉ ಬಿಲ್ಲುಗಳು ಮಾತ್ರ ಇರುತ್ತವೆ.

ಉ) ಕಾಮಗಾರಿಗಳ ಪ್ರಗತಿಯು ಸ್ಥಗಿತಗೊಳ್ಳದಂತೆ ನೋಡಿಕೊಳ್ಳಲಾಗುತ್ತಿದೆ. ಹ ಭರವಸೆ ಪತ್ರ ಬಿಡುಗಡೆ ಆದಂತೆ ಉಳಿಕೆ ಬಿಲ್ಲುಗಳನ್ನು ತೀರುಪಳಿ ಮಾಡಲಾಗುತ್ತಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 183

ಅನುಬಂಧ

ಏಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆ ಮತ್ತು ಕಟ್ಟಡಗಳ ಅಭಿವೃದ್ಧಿಗಾಗಿ ಪುದಾನ, ವೆಚ್ಚದ ವಿವರಗಳು

(ಲಕ್ಷ ರೂ.ಗಳಲ್ಲಿ)

	1993-94ರಲ್ಲಿ ನಿಗದಿ ಪಡಿಸಿದ ಅನುದಾನ	ಡಿಸೆಂಬರ್ 93ರವರೆಗೆ ವರೆಗೆ ಬಿಡುಗಡೆ ಆದ ಹಣ ಭರವಸೆ ಪತ್ರದ ಮೊತ್ತ	ಡಿಸೆಂಬರ್ 93ರವರೆಗೆ ವರೆಗೆ ಆಗಿರುವ ವೆಚ್ಚ
ಧಾರವಾಡ	1077.85	531.90	626.71
ಉತ್ತರ ಕನ್ನಡ	718.92	248.00	257.68
ಬೆಳಗಾಂ	933.27	327.36	404.65
ಬಿಜಾಪುರ	852.75	248.77	322.27
ಗುಲ್ಬರ್ಗ ಜಿಲ್ಲೆ	858.53	349.12	361.29
ಅ) ಲೋಕೋಪಯೋಗಿ ಇಲಾಖೆ			
ಅ) ಹೆಚ್.ಕೆ.ಡಿ.ಬಿ.	537.00	180.90	180.90
ಬೀದರ್			
ಅ) ಲೋಕೋಪಯೋಗಿ ಇಲಾಖೆ	334.87	169.19	188.86
ಅ) ಹೆಚ್.ಕೆ.ಡಿ.ಬಿ.	70.00	139.59	139.59
ಬಳ್ಳಾರಿ			
ಅ) ಲೋಕೋಪಯೋಗಿ ಇಲಾಖೆ	812.96	237.53	269.55
ಅ) ಹೆಚ್.ಕೆ.ಡಿ.ಬಿ.	165.00	151.90	151.90
ರಾಯಚೂರು			
ಅ) ಲೋಕೋಪಯೋಗಿ ಇಲಾಖೆ	1064.02	276.50	312.67
ಅ) ಹೆಚ್.ಕೆ.ಡಿ.ಬಿ.	180.00	146.84	146.84
ಮೈಸೂರು	1242.70	409.52	540.19
ಮಂಡ್ಯ	621.19	189.77	239.55
ಬೆಂಗಳೂರು	3415.18	876.19	1107.06
ತುಮಕೂರು	751.33	119.54	184.79
ಕೋಲಾರ	661.84	137.53	199.61
ಹಾಸನ	1208.81	334.89	452.41
ಚಿಕ್ಕಮಗಳೂರು	473.40	144.66	193.71
ಶಿವಮೊಗ್ಗ	1240.36	287.10	423.17
ಚಿತ್ರದುರ್ಗ	791.71	155.29	247.59
ದಕ್ಷಿಣ ಕನ್ನಡ	1278.96	210.11	345.65
ಕೊಡಗು	291.37	81.40	130.61
ಒಟ್ಟು	19582.02	5953.60	7427.25

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಸನ್ಮಾನ್ಯ ಅಧ್ಯಕ್ಷರೆ, ಹೈದರಾಬಾದ್ ಕರ್ನಾಟಕ ವೇಶದಲ್ಲಿ ರಸ್ತೆಗಳ ಅಭಿವೃದ್ಧಿಗೆ ಖರ್ಚು ಮಾಡಲಾದ ಹಣವೆಷ್ಟು? ಮತ್ತು ಉಳಿದ

ಹಣವೆಷ್ಟು ಎಂದು ಕೇಳಿದ್ದಕ್ಕೆ 131.20 ಲಕ್ಷ ರೂಪಾಯಿಗಳು ಬಾಕಿ ಉಳಿದಿದೆಯೆಂ
ಉತ್ತರಿಸಿದ್ದಾರೆ. ಆದರೆ, ಅದರ ಬಿಲ್ ಕೊಟ್ಟಿಲ್ಲ. ಬಹಳಷ್ಟು ಕಂಟ್ರಾಕ್ಟರ್
ತೊಂದರೆಯಲ್ಲಿದ್ದಾರೆ, ತಾವು ಕೊಟ್ಟಂಥ ಚೆಕ್ಕಿನ ದುಡ್ಡು ಅವರಿಗೆ ವಾಪಸ್ ಬರಲೆ
ಅನಂತರ, ತಾವು ಕೆಲವು ಜಿಲ್ಲಾವಾರು ಅಂಕಿ-ಅಂಶಗಳನ್ನು ಕೊಟ್ಟಿದ್ದೀರಿ. 1993-94ಕ
ನಿಗದಿ ಪಡಿಸಿದ ಅನುದಾನ ಮತ್ತು ಡಿಸೆಂಬರ್, 93ರವರೆಗೆ ಬಿಡುಗಡೆಯಾದ
ಹಣ ಹಾಗೂ 93ನೇ ಡಿಸೆಂಬರ್ ಅಂತ್ಯದವರೆಗೆ ಆಗಿರುವ ವೆಚ್ಚವನ್ನು ನೋಡಿ
ನಿಗದಿಪಡಿಸಿರುವ ಹಣ 19,582.2ಲಕ್ಷ ರೂಪಾಯಿಗಳು, ಅದರಲ್ಲಿ ಬಿಡುಗಡೆಯಾಗಿರುವು
5,953.60ಲಕ್ಷ ರೂಪಾಯಿಗಳು. ಅಂದರೆ, ಇನ್ನೂ 13,626.38 ಲಕ್ಷ ರೂಪಾಯಿಗಳ
ತಾವು ಬಿಡುಗಡೆ ಮಾಡಿಲ್ಲ. ಅನಂತರ ಖರ್ಚು ಮಾಡಿರತಕ್ಕಂಥಾದ್ದು 5
ರೂಪಾಯಿಗಳು ಮಾತ್ರ. ಡಿಸೆಂಬರ್, 93ರವರೆಗೆ ಒಟ್ಟು 7427.25ಲಕ್ಷ ರೂಪಾಯಿಗ
ಖರ್ಚಾಗಿದ್ದು, ಕೊಟ್ಟಿರುವುದು 5,953ಲಕ್ಷ ರೂಪಾಯಿಗಳು. ಆದ್ದರಿಂದ, ಇ
1,474 ಲಕ್ಷ ರೂಪಾಯಿಗಳನ್ನು ತಾವು ಕಂಟ್ರಾಕ್ಟರ್‌ದಾರರಿಗೆ ಕೊಡಬೇಕಾಗಿದೆ. ನ
ಭಾಗದಲ್ಲಿ ಮೊದಲೇ ರಸ್ತೆಗಳು ಸರಿಯಿಲ್ಲ, ಬರೀ ಮಣ್ಣು, ಕಲ್ಲುಗಳ ರಸ್ತೆಯಾಗಿ
ಆದುದರಿಂದ ಅಲ್ಲಿ ವಿಶೇಷವಾಗಿ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರವೇನಾದ
ಕ್ರಮ ಕೈಗೊಂಡಿದೆಯೇ? ಈಗ ಒಬ್ಬೊಬ್ಬ ಎಂ.ಪಿ.ಗೆ ಅವರವರ ಕ್ಷೇತ್ರಗಳಲ್ಲಿ ರಿಪ
ಮತ್ತೊಂದು ಮಾಡುವುದಕ್ಕೆ 2 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದ
ಅದೇ ರೀತಿ ಎಂ.ಎಲ್.ಎ. ಗಳಿಗೂ ಎಷ್ಟು ಹಣ ಕೊಡುತ್ತೀರಿ ಅಥವಾ ಎಂ.ಎಲ್.
ಕ್ಷೇತ್ರಗಳಲ್ಲಿ ಇಷ್ಟು ಕೆಲಸ ಮಾಡುತ್ತೇವೆಂದಾದರೂ ಹೇಳಿ. ಈಗ ಏನಾಗಿದೆಯೆಂ
ಯಾವುದೇ ಸಣ್ಣ ಕೆಲಸ ತೆಗೆದುಕೊಳ್ಳಬೇಕೆಂದರೂ ದುಡ್ಡಿಲ್ಲ. ಆದುದರಿಂದ, ಇ
ಬಗ್ಗೆ ನಿರ್ದಿಷ್ಟ ನೀತಿ ನಿರೂಪಣೆ ಮಾಡಿದ್ದೀರಾ? ಎಂಬುದನ್ನು ದಯಮಾ
ಸ್ಪಷ್ಟಪಡಿಸಬೇಕು.

ಶ್ರೀ ಕೆ.ಎಚ್. ರಂಗನಾಥ್: ನಾನು ತಮ್ಮ ಕೊನೆಯ ಪ್ರಶ್ನೆಗೆ ಮಾ
ಉತ್ತರಿಸುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರದವರು ಎಂ.ಪಿ.ಗಳಿಗೆ ಕೋಟಿಗಟ
ಹಣ ಕೊಟ್ಟಿದ್ದಾರೆ. ನಾವೇನೂ ಕೊಡುವುದಿಲ್ಲ.

ಶ್ರೀ ಸಿ. ಬೈರೇಗೌಡ: ಎಂ.ಪಿ.ಗಳು ಇಲ್ಲಿಗೆ ಬಂದು ಅವರೂ ಪಟ್ಟಿ ಕೊಡುತ್ತಾ

ಶ್ರೀ ಕೆ.ಎಚ್. ರಂಗನಾಥ್: ಕಳೆದ ಸಲ 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆ
ತಾವು ಕೇಳಿದ್ದಕ್ಕೆ 5 ಲಕ್ಷ ರೂಪಾಯಿಗಳ ಕೆಲಸವನ್ನು ಕೈಗೆತ್ತಿಕೊಂಡಿದ್ದೇವೆ. ಅದ
ಪೂರ್ತಿಗೊಳಿಸಿದ ನಂತರ ಮತ್ತೆ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಇದ
ಸರಿಯಾಗಿ ಗಮನಿಸಿಲ್ಲವೆಂದು ಕಾಣುತ್ತದೆ, ಅವಸರದಲ್ಲಿ ಕಳೆದಿದ್ದಾರೆ. 19 ಕೋಟಿಯ
5 ಕೋಟಿ ಕಳೆದು ಮತ್ತೆ 1 ಕೋಟಿ ಕಳೆದರೆ ಒಂದು ಸಾವಿರವಾಗುತ್ತದೆಂ
ಹೇಳಿದರು. ಆದರೆ, ಹಾಗೆ ಆಗುವುದಿಲ್ಲ. ಪ್ರತಿಯೊಂದರ ಬಗ್ಗೆ ತಾವು ಸರಿಯ
ನೋಡುತ್ತಾ ಹೋದರೆ ಅರ್ಥವಾಗುತ್ತದೆ. ತಮಗೆ ಒದಗಿಸಿರುವ ಪಟ್ಟಿಯ ಎರಡ
ಕಲಂನಲ್ಲಿ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಎಲ್.ಪಿ.ಸಿ. ಬಗ್ಗೆ ಕೊಟ್ಟಿದ್ದೇ
ಮೂರನೇ ಕಲಂನಲ್ಲಿ ಕೆಲಸವಾಗಿರುವುದಕ್ಕೆ ಖರ್ಚಾಗಿರುವ ಹಣವನ್ನು ಕೊಟ್ಟಿದ್ದೇ
ಅದರಲ್ಲಿ ಹಣ ಆವೊತ್ತೇ ಖರ್ಚಾಗಿರುತ್ತದೆಂದಲ್ಲ. ಡಾಂಬರ್ ಹಾಕಿಸುವುದಕ್ಕೆ, ಸಿಮೆಂಟ್
ಸ್ಟೀಲ್ ಇತ್ಯಾದಿಗಳಿಗೆ ಖರ್ಚಾಗಿರುತ್ತದೆ. ಅಲ್ಲದೆ, ನಮ್ಮ ಸ್ಪೋರ್ನಿಂದ ಸಹ ಖರ್ಚಾಗಿ
ಆದುದರಿಂದ, ತಾವು ಕೇಳಿದಷ್ಟು ಪೂರ್ತಿ ಹಣವನ್ನು ನಾವು ಕೊಡಬೇಕಾದ್ದಿ
ಈಗ ಬೀದರ್ ಜಿಲ್ಲೆಗೆ ಲೋಕೋಪಯೋಗಿ ಕೆಲಸಕ್ಕೆ 303 ಕೋಟಿ 34 ಲಕ್ಷ
ಸಾವಿರ ರೂಪಾಯಿಗಳ ಅನುದಾನವಿದ್ದಿದ್ದು 1 ಕೋಟಿ 69 ಲಕ್ಷ 19 ಸಾವಿ
ರೂಪಾಯಿಗಳ ಕ್ಯಾಷ್ ಬಿಡುಗಡೆಯಾಗಿದೆ. ನಿಮ್ಮ ಜಿಲ್ಲೆಯಲ್ಲಿ ಇದುವರೆಗೆ 1 ಕೋ

ಕ್ಷ 86 ಸಾವಿರ ರೂಪಾಯಿಗಳಷ್ಟು ಕೆಲಸವಾಗಿದೆ. ಅದರಲ್ಲಿ ಡಾಂಬರ್, ವಗೈರೆಗಳಿಗೆ
ಕೊಟ್ಟಿರುವುದರಿಂದ ಅದನ್ನು ಬುಕ್ ಅಡ್ಜಸ್ಟ್‌ಮೆಂಟ್ ಎಂದು ನಾವು
ತಿಕೊಳ್ಳುತ್ತೇವೆ. ಆದರೆ, ಕ್ಯಾಷ್ ಎಷ್ಟು ಬೇಕಾಗುತ್ತದೆಂದು ಗೊತ್ತಿಲ್ಲ, ಅದನ್ನು
ನೋಡುತ್ತೇನೆ. ಆದುದರಿಂದ, ಎಲ್ಲಕ್ಕೂ ಕೂಡ ಕ್ಯಾಷ್ ಕೊಡಬೇಕಾಗುತ್ತದೆಂದು
ೂ ಕೂಡ ಭಾವಿಸಬಾರದು. ಮತ್ತು ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ
ಕ್ಷ ರೂಪಾಯಿಗಳ ಅನುದಾನವಿರುವುದಕ್ಕೆ 1 ಕೋಟಿ 39 ಲಕ್ಷ ರೂಪಾಯಿಗಳಷ್ಟು
ಗಿ ಖರ್ಚು ಮಾಡಲಾಗಿದೆ. ಅಷ್ಟು ದುಡ್ಡು ಬಿಡುಗಡೆಯಾಗಿದೆ. ಏಕೆ ಅಷ್ಟೊಂದು
ಕೊಟ್ಟಿರಿ ಎಂದು ಅಧಿಕಾರಿಗಳನ್ನು ಕೇಳುತ್ತಿದ್ದೇನೆ. ಹೀಗೆ ಅಗತ್ಯಕ್ಕಿಂಥ ಹೆಚ್ಚು
ಕೊಡುವುದರಿಂದ ಇತರೆಡೆಯ ಕೆಲಸಗಳಿಗೆ ತೊಂದರೆಯಾಗುತ್ತದೆಂದು ನಮ್ಮ
ಖಾ ಅಧಿಕಾರಿಗಳನ್ನು ಕೇಳುತ್ತಿದ್ದೇನೆ. ಹಣವನ್ನು ಮಾನ್ಯ ಗುರುಪಾದಪ್ಪನವರ
ರಿಗೆ ಹೆದರಿ ಕೊಟ್ಟು ಬಿಟ್ಟ ಹಾಗೆ ಕಾಣುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ: ಎಲ್ಲಿ ಕೊಟ್ಟಿದ್ದಾರೆ. ಕೊಟ್ಟಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ಕೆಲಸ ಹೆಚ್ಚು ಮಾಡಿದ್ದು ಅಲ್ಲದೆ, ಅನುದಾನಕ್ಕಿಂತ
ದುಡ್ಡು ವಸೂಲು ಮಾಡಿಕೊಂಡಿದ್ದಾರೆ. ಅವರು ಈಗ ಹೇಳುತ್ತಾರೆ,
ಕ್ಟಾರರ ಬಿಲ್ ಕೊಟ್ಟಿಲ್ಲ ಎಂದು; ಹೀಗೆಲ್ಲಾ ಆಗಿದೆ. 70 ಲಕ್ಷ ರೂ.ಗಳು
ತಕ್ಕದ್ದು ಇದೆ ಎಂದು ಹೇಳುತ್ತಿದ್ದಾರೆ. ಇದನ್ನು ನಾನು ತಿಳಿದುಕೊಳ್ಳುತ್ತೇನೆ.
ಕ್ಷೇತ್ರದಲ್ಲಿ ಅನುದಾನವಿರುವುದು 70 ಲಕ್ಷರೂ.ಗಳು ಅದನ್ನು ಕೊಟ್ಟು ಆಗಿದೆ.
ಕ್ಷ ರೂ.ಗಳು ಕೆಲಸವಾಗಿದೆ. ಎಲ್.ಓ.ಸಿ. ಅದನ್ನು ಬಿಡುಗಡೆ ಮಾಡಿಯಾಗಿದೆ.
ದರಿಂದ ಹಾಗೆ ಭಾವನೆ ಮಾಡುವುದು ತಪ್ಪು. ಕೆಲವು ಕಡೆ ತಪ್ಪಾಗಿದೆ.
ಲ್ಲಿ 19 ಕೋಟಿ 582 ಲಕ್ಷ ರೂ.ಗಳ ಕೆಲಸ ಏನಿದೆ ಅದರಲ್ಲಿ 5 ಕೋಟಿ
53 ರೂ.ಗಳು ಈಗ ಬಿಡುಗಡೆಯಾಗಿದೆ. ಉಳಿದ ಹಣ ಮಾರ್ಚಿ 31ರೊಳಗೆ
ಗಡೆಯಾಗುತ್ತದೆ. ಎಲ್ಲಾ ಕೆಲಸವನ್ನು ಮಾಡಬೇಕಾಗುತ್ತದೆ. ಯಾರಿಗೂ ಪೆಂಡಿಂಗ್
, ಕಂಟ್ರಾಕ್ಟಾರರು ಹಣ ಬರಲಿಲ್ಲ ಎಂದು ಯಾರೂ ಭಾವಿಸಕೂಡದು.
ಗೂ ಕೊಟ್ಟಿದ್ದೇವೆ. ಆದುದರಿಂದ ಇನ್ನು 3-4 ದಿನಗಳಲ್ಲಿ ಕಂಟ್ರಾಕ್ಟಾರರು ಅಷ್ಟು
ಇಲ್ಲದಿದ್ದರೆ ಏನು ಮಾಡುತ್ತಾರೆ, ನಾವೇ ಮಾಡಿಸಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: 4 ತಿಂಗಳು ಆದರೆ ಹೇಗೆ ಮಾಡಬೇಕು.

ಶ್ರೀ ಕೆ.ಹೆಚ್. ರಂಗನಾಥ್: ನಾಲ್ಕು ತಿಂಗಳು ಯಾರಿಗೂ ಆಗಿಲ್ಲ. ಬರೀ ಕೈ
ಪ್ಪ ಬಂದು ನಮ್ಮ ಹತ್ತಿರ ಕಂಟ್ರಾಕ್ಟ್ ಮಾಡಿ ದುಡ್ಡು ತೆಗೆದುಕೊಂಡು
ಗುವುದಕ್ಕೆ ಸಾಧ್ಯವೇ? ಅವರಿಗೂ ಗಡವು ಸಿಗಬೇಕಾಗುತ್ತದೆ. ಒಂದೆರಡು ತಿಂಗಳು
ಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್: ದುಡ್ಡು ಇಲ್ಲದೇ ಕಂಟ್ರಾಕ್ಟಾರರು ಏನು
ಮಾಡುತ್ತಾರೆ? ದುಡ್ಡು ಇಲ್ಲದೆ ಸರ್ಕಾರ ಆಯವ್ಯಯ ಹೇಗೆ ಮಾಡಿತು ಎಂಬುದೇ
ಪ್ರಶ್ನೆ.

ಶ್ರೀ ಕೆ. ಹೆಚ್. ರಂಗನಾಥ್: ಶ್ರೀ ಬನ್ನಿಕೋಡ್ ಅವರು ಏನೂ ಓದುವುದಿಲ್ಲ.
ಹೊಳೆಯುತ್ತದೊ ಅದನ್ನೇ ಹೇಳಿಬಿಡುತ್ತಾರೆ. ಅದೇ ನಮಗೆ ಬಂದಿರುವ ಕಷ್ಟ.
ಕೆಲಸಕ್ಕೆ ಏನು ಗ್ರಾಂಟ್ ಇಟ್ಟಿದ್ದೇವೆ, ಆ ಎಲ್ಲಾ ಕೆಲಸವಾಗುತ್ತದೆ. ಅದಕ್ಕೆ
, ಹಣ ಬಿಡುಗಡೆಯಾಗುತ್ತದೆ. ಆದುದರಿಂದ ಯಾವ ವಿಧವಾದಂತಹ ಕೆಲಸವನ್ನು
ಬೇಕೆಂದು ಹೇಳಿದ್ದೇವೆ. ಅದಕ್ಕೆ ಹಣ ಬಿಡುಗಡೆಯಾಗುತ್ತದೆ.

(ಮುಂದಲ)

ಅಧ್ಯಕ್ಷರು : ಬೈರೇಗೌಡರೇ ಕುಳಿತುಕೊಳ್ಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಕೇಳಿದರೆ ಏನಾಗುತ್ತದೆ.

ಅಧ್ಯಕ್ಷರು : ಕೇಳಿದರೆ ಏನಾಗುತ್ತದೆಂದರೆ ಟೈಮ್ ಆಗುತ್ತದೆ. ಪ್ರಶ್ನೆಗಳು ಲಾ ಆಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : ಆ ಮಾನ್ಯ ಸದಸ್ಯರಿಗೆ ಇನ್ನು ಎ ಉಪಪ್ರಶ್ನೆಗಳನ್ನು ಕೇಳುವಂತಹ ಅಧಿಕಾರವಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ತಾವೇ ಹೇಳಿದ್ದೀರಿ. ಹಣ ಯಾವ ಉಳಿದಿಲ್ಲ. 131 ಕೋಟಿ 20 ಲಕ್ಷ ರೂ.ಗಳು ಉಳಿದಿದೆ ಎಂದು ಉತ್ತರ ಹೇಳಿದ್ದೀರಿ. ಇಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಲೋಕೋಪಯೋ ಕಾಮಗಾರಿಗೆ ಪಾವತಿ ಮಾಡಬೇಕಾದಂಥ ಒಟ್ಟು 131 ಕೋಟಿ 20 ಲಕ್ಷ ರೂ.ಗ ಉಳಿಕೆಯ ಬಿಲ್ ಮಾತ್ರವಿರುತ್ತದೆ ಎಂದು ತಾವು ಹೇಳಿದ್ದೀರಲ್ಲಾ, ಅಂದಮೆ ಕಂಟ್ರಾಕ್ಟಾರರ ಗತಿ ಏನಾಗುತ್ತದೆ? ತಾವು ಹೇಳಿದ್ದೀರಿ ಕೊಡುತ್ತೇವೆಂದು; ನಿ ಇಲ್ಲಿ ಎಂಎಲ್ಎಗೆ ಫಂಡ್ ಎಂದು ಕೊಡುವುದಿಲ್ಲ. ರೋಡುಗಳ ಗತಿ ದೇವ ಗತಿ, ತಾವು ಅದರ ಬಗ್ಗೆ ನೀತಿ ನಿರೂಪಣೆ ಮಾಡುವುದಿಲ್ಲ. ಎಂಎಲ್ಎಗ ಬರೀ 5 ಲಕ್ಷ ರೂಪಾಯಿಗಳು ಕೊಡುತ್ತೀರಿ ಅಂದರೆ ಅದು ಎಂಎಲ್ಎ ಮನೆಗ ಅಲ್ಲ ರೋಡ್ ಮತ್ತು ಕಾಮಗಾರಿಗಳಿಗೆ;

ಶ್ರೀ ಸಿ. ಬೈರೇಗೌಡ: ವಿಧಾನಸಭಾ ಕ್ಷೇತ್ರಕ್ಕೆ ಎಂದು ಕೊಡತಕ್ಕದ್ದು ; ಕ್ಷೇತ್ರದಿಂದ ಯಾರು ರೆಪ್ರೆಸೆಂಟ್ ಮಾಡುತ್ತಾರೆ ಅವರು ಮಾತ್ರ ತೆಗೆದುಕೊಳ್ಳಲಿ.

ಶ್ರೀ ಗುರುಪಾದಪ್ಪ ನಾಗಮಮಾರಪಳ್ಳಿ: ಅವರಿಗೆ ಏಕೆ ಕೊಡಬಾರದು?

ಶ್ರೀ ಕೆ.ಹೆಚ್. ರಂಗನಾಥ್ : 131 ಕೋಟಿ ರೂಪಾಯಿಗಳು ಏನಿದೆ ಅದ ನಾನು ಹೇಳಿದೆ. ಯಾವ ಬಿಲ್ ಉಳಿಯುತ್ತದೆ ಅದನ್ನು ಮಾರ್ಚಿ ಒಳ ಮಾಡುತ್ತೇವೆ. ಬಡ್ಜೆಟ್ಟಿನಲ್ಲಿ ಕೆಲಸವನ್ನು ಸೇರಿಸಿದ್ದೇವೆ. ಪ್ರೋಗ್ರಾಂ ವರ್ಕ್ನಲ್ಲಿ ಏ ಸೇರಿಸಿದ್ದೇವೆ.ಅದನ್ನು ನಾವು ಪೂರ್ತಿ ಮಾಡುವಂತಹ ಜವಾಬ್ದಾರಿ ಇದೆ. ಆ ಆಗುತ್ತದೆ ಎನ್ನುವಂತಹ ಮಾತನ್ನು ಹೇಳಿದೆ. ಮಾನ್ಯ ಸದಸ್ಯರು ಬೇರೆ ಏ ಹಣವನ್ನು ಕೇಳುತ್ತಿದ್ದಾರೆ. ಅದಕ್ಕೆ ಉತ್ತರ ಹೇಳಿದೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ: ಮಾರ್ಚಿ ಒಳಗೆ 13 ಸಾವಿರ ಕಂಪ್ಲೀಟ ಮಾಡುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ತಾವು ನಿಧಾನವಾಗಿ ಏಕೆ ಮಾತನಾಡುವುದಿಲ್ಲ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ: ಮಾರ್ಚಿ ಒಳಗೆ 13, 626 ರೂಪಾಯಿಗಳನ ಕಂಪ್ಲೀಟ್ ಆಗಿ ಕೊಡುತ್ತೇವೆಂದು ಹೇಳುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಮಾಡುತ್ತೇನೆ ಎಂದು ಹೇಳುತ್ತೇನೆ, ಈ ವರ್ಷದ ಬಜೆಟ್ ಗ್ರಾಂಟ್ ನಾನ್ ಪ್ಲಾನ್ ವರ್ಕ್ನಲ್ಲಿ ಏನಿದೆ, ಪ್ರೋಗ್ರಾಂ ಏನೇನಾಗಿದ ಎಷ್ಟು ಹಣ ಇಟ್ಟಿದ್ದೇವೆ. ಅದನ್ನು ಖರ್ಚು ಮಾಡಿ, ಆ ಕೆಲಸವನ್ನು ಪೂರ್ಣ ಮಾಡುತ್ತೇವೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿಶ್ವಬ್ಯಾಂಕಿನಿಂದ ಸಾಲ

65 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಉಪಮುಖ್ಯಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿಶ್ವಬ್ಯಾಂಕ್ ಹಾಗೂ ಇತರೆ ಸಂಸ್ಥೆಗಳಿಂದ ಇದುವರೆವಿಗೂ ತೆಗೆದುಕೊಂಡಿರುವ ಸಾಲಗಳ ಮೊತ್ತವೆಷ್ಟು ಹಾಗೂ ಈ ಸಾಲಗಳ ಮರುಪಾವತಿ ಆಗುತ್ತಿದೆಯೇ?